

بِسۡمِ اللّٰہِ الرَّحۡمٰنِ الرَّحِیۡمِ

# ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಖಾತಮುನ್ನಬಿಯ್ಯೀನ್– ಅಹ್ಮದಿಯರ ಸುದೃಢವಾದ ವಿಶ್ವಾಸ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **16–12–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್, ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇದು ಇಸ್ಲಾಮೀ ಕಾಲ ನಿರ್ಣಯದ ತಿಂಗಳಾದ ರಬೀಉಲ್ ಅವ್ವಲ್ ಆಗಿದೆ. ಇಸ್ಲಾಮೀ ಲೋಕದಲ್ಲಿ ಮತ್ತು ವಿಶಿಷ್ಟವಾಗಿ ಹಿಂದೂಸ್ಥಾನ ಪಾಕಿಸ್ಥಾನಗಳಲ್ಲಿ ಈ ತಿಂಗಳಿಗೆ ವಿಶಿಷ್ಟ ಮಹತ್ವವಿರುವುದು ಈ ತಿಂಗಳ ಹನ್ನೆರಡರಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜನಿಸಿರುವುದರಿಂದಾಗಿದೆ. ಒಂದು ಸಂಶೋಧನೆ ಪ್ರಕಾರ ಮತ್ತು ಹಝ್ರತ್ ಸಾಹಿಬ್‌ಝಾದ ಮಿರ್ಝಾ ಬಶೀರ್ ಅಹ್ಮದ್ ರಝಿಯಲ್ಲಾಹು ಅನ್‌ಹು ತನ್ನ ಗ್ರಂಥವಾದ ಸೀರತುನ್ನಬಿಯಲ್ಲಿ ಈಜಿಪ್ಟಿನ ಒಬ್ಬ ವಿದ್ವಾಂಸರನ್ನು ಉಲ್ಲೇಖಿಸಿ ಬರೆದ ಪ್ರಕಾರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜನಿಸಿರುವುದು ರಬೀಉಲ್ ಅವ್ವಲ್ ತಿಂಗಳು ದಿನಾಂಕ 9ರಲ್ಲಾಗಿದೆ ಎಂದು ಬರೆದಿದ್ದಾರೆ. ಒಟ್ಟಿನಲ್ಲಿ, ರಬೀಉಲ್ ಅವ್ವಲ್ ತಿಂಗಳು, ನಮ್ಮ ಯಜಮಾನರೂ ನಮ್ಮ ಮಾರ್ಗದರ್ಶಕರೂ ಆಗಿರುವ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜನಿಸಿದ ತಿಂಗಳಾಗಿದೆ. ಆದರೆ ಖೇದಕರವಾದ ಸಂಗತಿಯೆಂದರೆ, ಮಾನವರೆಲ್ಲರ ಹಿತೈಷಿಯೂ ಸಕಲಲೋಕಗಳಿಗೆ ಅನುಗ್ರಹವಾಗಿಯೂ ಆಗಮಿಸಿದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜನ್ಮದಿನವನ್ನು ಸಂತೋಷದಿಂದ ಆಚರಿಸುತ್ತಿರುವ ಮುಸ್ಲಿಮರು, ಪರಸ್ಪರ **ಖುಲೂಬುಹುಮ್ ಶತ್ತಾ** (ಅವರ ಹೃದಯಗಳಲ್ಲಿ ಬಿರುಕು ಬಿದ್ದಿದೆ) ಎಂಬ ಪವಿತ್ರ ಖುರ್‌ಆನ್ ವಚನದ ಪ್ರಕಾರ ವರ್ತಿಸುವವರಾಗಿದ್ದಾರೆ. ಅಲ್ಲಾಹನು ಮುಸ್ಲಿಮರ ಪರಸ್ಪರ ಸಂಬಂಧಗಳ ಬಗ್ಗೆ **ರುಹಮಾಉ ಬೈನಹುಮ್** (ಪರಸ್ಪರ ಬಹಳ ಹೆಚ್ಚು ದಯೆದೋರುವವರು) ಎಂದು ಹೇಳಿದ್ದಾನೆ. ಆದರೆ ದಯೆಯ ವಿಷಯ ಬಿಟ್ಟುಬಿಡಿರಿ. ಮುಸ್ಲಿಮರಲ್ಲಿ ಬಹುತೇಕ ಜನರು ಒಬ್ಬರಿನ್ನೊಬ್ಬರ ರಕ್ತ ಹೀರುವ ರಕ್ತದಾಹಿಗಳಾಗಿದ್ದಾರೆ. ಇಂತಹ ವಾರ್ತೆಗಳು ಪ್ರತಿದಿನ ಲಭಿಸುತ್ತಿವೆ. ನೂರಾರು ಮುಸ್ಲಿಮರು ಮುಸ್ಲಿಮರಿಂದ ಹತರಾಗುತ್ತಿದ್ದಾರೆ. ಇದು ಅಲ್ಲಾಹನಿಗೆ ಮತ್ತು ಅವನ ಸಂದೇಶವಾಹಕರಿಗೆ ತೀರಾ ಇಷ್ಟವಿಲ್ಲದ್ದು ಆಗಿದೆ. ಮುಸ್ಲಿಮನು ಮುಸ್ಲಿಮನನ್ನು ಹತ್ಯೆ ಮಾಡುತ್ತಿದ್ದಾನೆ. ಅಲ್ಲಾಹನ ಮತ್ತು ಅವನ ಸಂದೇಶವಾಹಕನ ಹೆಸರಲ್ಲಿ ಕೊಲ್ಲುತ್ತಿದ್ದಾನೆ. ಸರ್ವಲೋಕಗಳ ಪರಿಪಾಲಕನಾದ, ಪರಮದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ಹೆಸರಿನಲ್ಲಿ ಮತ್ತು ಸಕಲಲೋಕಗಳಿಗೆ ಅನುಗ್ರಹವಾಗಿರುವ ಸಂದೇಶವಾಹಕರ ಹೆಸರಿನಲ್ಲಿ ದೌರ್ಜನ್ಯ ಮತ್ತು ಬರ್ಬರ ಕೃತ್ಯಗಳನ್ನು ನಡೆಸಿ ಬಲಹೀನರನ್ನೂ ಮಹಿಳೆಯರನ್ನೂ ಮಕ್ಕಳನ್ನೂ ನಿಷ್ಕಳಂಕರನ್ನೂ ಮನೆಗಳಿಂದ ಹೊರಗೆ ದಬ್ಬಿ ನಿರ್ಗತಿಕರನ್ನಾಗಿ ಮಾಡಲಾಗುತ್ತದೆ. ಅವರು ನಾಚಿಕೆ ಮತ್ತು ಹಸಿವೆಯಿಂದ ಬಳಲುವಂತೆ ಮಾಡಲಾಗುತ್ತದೆ. ಅವರನ್ನು ಕೊಲ್ಲಲಾಗುತ್ತಿದೆ. ಅಲ್ಲಾಹನ ಮತ್ತು ಅವನ ಸಂದೇಶವಾಹಕರ ನಾಮದಲ್ಲಿ ಈ ಎಲ್ಲಾ ದೌರ್ಜನ್ಯಗಳನ್ನು ಅತ್ಯಂತ ಹಟಮಾರಿತನದಿಂದಲೂ ನಿರ್ಲಜ್ಜೆಯಿಂದಲೂ ಮಾಡಲಾಗುತ್ತಿದೆ.

ಅಲ್ಲಾಹನು ಹೇಳುವುದೇನೆಂದರೆ, ಒಬ್ಬ ಮುಸ್ಲಿಮನನ್ನು ಉದ್ದೇಶಪೂರ್ವಕವಾಗಿ ಕೊಲ್ಲುವುದು ನಿಮ್ಮನ್ನು ನರಕಕ್ಕೆ ಒಯ್ಯಲು ಕಾರಣವಾಗುವುದು ಎಂದು. ನಿಷ್ಕಳಂಕವಾದ ಒಬ್ಬನನ್ನು ಕೊಂದರೆ ನೀವು ನರಕಾಗ್ನಿಯಿಂದ ರಕ್ಷಿಸಲ್ಪಡಲಾರಿರಿ ಎಂದು. ಆದರೆ ಈ ಧಾರ್ಮಿಕ ಗುತ್ತೇದಾರರು ಮತ್ತು ಸ್ವಾರ್ಥಿಗಳಾದ ನಾಯಕರು ಸಾಮಾನ್ಯರಾದ ಅವಿದ್ಯಾವಂತ ಮುಸ್ಲಿಮರಿಗೆ ಸ್ವರ್ಗದ ಆಶೆಯನ್ನು ನೀಡಿ ಇಂತಹ ಕೆಲಸಗಳಿಗೆ ಅವರನ್ನು ನೂಕುತ್ತಾ ಇದ್ದಾರೆ. ಈ ಜನರು ಇಸ್ಲಾಮ್ ಧರ್ಮಕ್ಕೆ ಎಂತಹ ಅಪಕೀರ್ತಿ ಉಂಟಾಗುವಂತೆ ಮಾಡಿದ್ದಾರೆಂದರೆ, ಈಗಿನ ಕಾಲದಲ್ಲಿ ಮುಸ್ಲಿಮೇತರ ಲೋಕದಲ್ಲಿ ಇಸ್ಲಾಮ್ ಧರ್ಮದ ಹೆಸರು ಆಲಿಸುವಾಗ ಮುಸ್ಲಿಮೇತರರ ಮನಸ್ಸಿನಲ್ಲಿ ಎದ್ದೇಳುವ ಪ್ರಥಮ ಕಲ್ಪನೆ ದೌರ್ಜನ್ಯ ಮತ್ತು ಬರ್ಬರತೆಯಾಗಿದೆ. ಆದರೆ, ಅಲ್ಲಾಹನು ಮತ್ತು ಅವನ ಸಂದೇಶವಾಹಕರು ವಿರೋಧಿಸಿರುವ ಒಂದು ವಿಷಯದಲ್ಲಿ ಈ ನಾಮಧಾರಿಗಳಾದ ಮುಸ್ಲಿಂ ನಾಯಕರೂ ಮತಪಂಡಿತರೂ ಎಲ್ಲರೂ ಪರಸ್ಪರ ಒಂದಾಗುತ್ತಾರೆ. ಅಲ್ಲಾಹನ ಸಂದೇಶವಾಹಕರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದರು: ಮುಸ್ಲಿಮರ ಸ್ಥಿತಿ ಹೀಗೆ ಆಗುವಾಗ, ಮುಸ್ಲಿಮರ ಹೃದಯ ಪರಸ್ಪರ ಬಿರುಕು ಬಿಟ್ಟಾಗ, ಅವರ ಸ್ಥಿತಿ **ಖುಲೂಬುಹುಮ್ ಶತ್ತಾ** ಎಂಬ ಸ್ಥಿತಿಗೆ ತಲಪಿದಾಗ, ಮುಸ್ಲಿಮರು ಒಬ್ಬರಿನ್ನೊಬ್ಬರ ಕೊರಳನ್ನು ಕತ್ತರಿಸಲು ಪ್ರಾರಂಭಿಸಿದಾಗ, ಮುಸ್ಲಿಮ್ ನಾಮಧಾರಿಗಳಾದ ಮತಪಂಡಿತರ ಸಮೀಪಕ್ಕೆ ಅವರಿಂದ ಮಾರ್ಗದರ್ಶನ ದೊರಕುವುದೆಂದು ಜನರು ಹೋಗುವಾಗ ಅವರ ಮತಪಂಡಿತರು ಸಹ ಅಲ್ಲಾಹನಿಂದ ದೂರ ಸರಿಯುವ ಕೆಲಸದಲ್ಲಿ ನಿರತರಾಗಿರುವುದಾಗಿ ಹಾಗೂ ಅವರ ಸ್ಥಿತಿ ಜನಸಾಮಾನ್ಯರ ಸ್ಥಿತಿಗಿಂತ ಕೆಟ್ಟದಾಗಿ ಕಂಡುಬರುವುದು ಎಂದು ಹೇಳಿದ್ದಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಬಗ್ಗೆ ಹೀಗೆ ಹೇಳಿದ್ದಾರೆ:

**ಉಲಮಾಉಹುಮ್ ಶರ್ರುಮನ್ ತಹ್‌ತ ಅದೀಮಿಸ್ಸಮಾಇ.** ಆಕಾಶದ ಕೆಳಗೆ ಜೀವಿಸುವ ಸೃಷ್ಟಿಗಳಲ್ಲಿ ಅತ್ಯಂತ ಕೆಟ್ಟ ಜೀವಿಗಳಾಗಿ ಅವರ ಮತಪಂಡಿತರಿರುವರು. ಹೀಗಾಗಲು ಕಾರಣವೇನೆಂದು ಸಹ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ. ಅವರು ಗಲಬೆ ಗೊಂದಲಗಳನ್ನು ಸೃಷ್ಟಿಸುವವರಾಗಿರುವರು. ಅವರ

ಮೂಲಕವೇ ಗಲಬೆ ಗೊಂದಲಗಳು ಹೊರಹೊಮ್ಮುವುವು ಎಂದು ಹೇಳಿದ್ದಾರೆ. ನಾವು ಇಂದಿನ ಕಾಲದ ಬಹುತೇಕ ಮತಪಂಡಿತರ ಕಡೆಗೆ ನೋಡುವಾಗ ಅವರು ಅಗ್ನಿಯನ್ನು ನಂದಿಸುವವರಾಗದೆ ಅಗ್ನಿಯನ್ನು ಪ್ರಜ್ವಲಿಸುವವರಾಗಿ ಕಾಣುತ್ತೇವೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ಸ್ಥಿತಿಯನ್ನು ಚಿತ್ರೀಕರಿಸಿದ ನಂತರ ಹೇಳಿದರು: ಇಂತಹ ಪರಿಸ್ಥಿತಿಯಲ್ಲಿ ಇಸ್ಲಾಮ್ ಬಗ್ಗೆ ನೋವನ್ನು ಹೊಂದಿದ ಮುಸ್ಲಿಮರು ನಿರಾಶರಾಗಬಾರದು. ಅಂತಹ ಸಮಯದಲ್ಲಿ ವಾಗ್ದತ್ತ ಮಸೀಹ್ ಆಗಿ ಮಹ್ದಿ ಇಮಾಂ ಆಗಮಿಸುವರು. ಅವರು ತಮ್ಮ ಯಜಮಾನರನ್ನು ಪರಿಪೂರ್ಣರಾಗಿ ಅನುಸರಿಸುವ ಗುಲಾಮರಾಗಿ ಮುಸ್ಲಿಮರಿಗೂ ಮುಸ್ಲಿಮೇತರರಿಗೂ ಇಸ್ಲಾಮಿನ ವಾಸ್ತವಿಕ ತತ್ವಗಳನ್ನು ವಿವರಿಸಿಕೊಡುವರು. ಇಸ್ಲಾಮಿನ ಸುಂದರ ಮತ್ತು ಪ್ರಕಾಶಮಾನವಾದ ಉಪದೇಶಗಳಿಂದ ಲೋಕವನ್ನು ಬೆಳಗುವರು. ಮತ್ತು ಏಕ ಸಮುದಾಯವನ್ನಾಗಿ ಜನರನ್ನು ಮಾಡುವರು.

ಈ ವಿಷಯವನ್ನು ಈ ಮತಪಂಡಿತರು ನಿರಾಕರಿಸುತ್ತಾರೆ. ಅವರು ಮುಸ್ಲಿಮ್ ಜನಸಾಮಾನ್ಯರಿಗೆ ತಪ್ಪು ಮಾಹಿತಿಗಳನ್ನು ನೀಡಿ ಗಲಭೆ ಗೊಂದಲಗಳನ್ನು ಸೃಷ್ಟಿಸಲು ಪ್ರಯತ್ನ ಮಾಡುತ್ತಿದ್ದಾರೆ. ಅವರು ಜನರ ಭಾವನೆಗಳೊಂದಿಗೆ ಆಟವಾಡುತ್ತಿದ್ದಾರೆ. ಅವರು ಗಲಭೆ ಗೊಂದಲಗಳನ್ನು ಸೃಷ್ಟಿಸುವ ಉದ್ದೇಶದಿಂದ, ಅಸ್ತಿತ್ವದಲ್ಲೇ ಇಲ್ಲದಂತಹ ಮಾತುಗಳನ್ನು ಜನರ ಮನಸ್ಸಿನಲ್ಲಿ ತುಂಬಿಸಿ ಅವರು ಉದ್ರೇಕಗೊಳ್ಳುವಂತೆ ಮಾಡುತ್ತಾರೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು **ಖಾತಮುನ್ನಬಿಯ್ಯೀನ್** ಆಗಿರುವರು ಎಂದೂ ಅವರ ಮೂಲಕ ಶರೀಅತ್ ಪರಿಪೂರ್ಣಗೊಂಡಿದೆ ಎಂದೂ ಪ್ರತಿಯೊಬ್ಬ ಮುಸ್ಲಿಮನೂ ಸಂಶಯಾತೀತವಾಗಿ ನಂಬುತ್ತಾನೆ. ಇದರ ಬಗ್ಗೆ ಪರಿಪೂರ್ಣ ನಂಬಿಕೆ ಹೊಂದದೆ ಒಬ್ಬ ಮುಸ್ಲಿಮನು ಮುಸ್ಲಿಮನಾಗಲಾರ. ಆದರೆ ಅಹ್ಮದಿಯರಿಗೆ **ಖತ್‌ಮೆನುಬುವ್ವತ್** ಬಗ್ಗೆ ವಿಶ್ವಾಸವಿಲ್ಲ ಎಂದು ಗಲಭೆಕೋರರಾದ ಈ ಮೌಲವಿಗಳು ಸುಳ್ಳು ಹೇಳಿ ಜನಸಾಮಾನ್ಯರ ಭಾವನೆಗಳನ್ನು ಅಹ್ಮದಿಯರ ವಿರುದ್ಧ ಉದ್ರೇಕಿಸುತ್ತಾರೆ. ಇದರ ಬಗ್ಗೆ ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್ ಎಂದು ಹೇಳಿ, **ಲಅ್‌ನತುಲ್ಲಾಹಿ ಅಲಲ್ ಕಾಧ಼ಿಬೀನ್** (ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪ ಬಂದೆರಗಲಿ) ಎಂದು ಮಾತ್ರ ಹೇಳಲು ಸಾಧ್ಯ. ಅಹ್ಮದಿ ಎಂದು ಹೇಳಿಕೊಂಡು ಒಬ್ಬನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು **ಖಾತಮುನ್ನಬಿಯ್ಯೀನ್** ಎಂದು ನಂಬುವುದಿಲ್ಲವಾದರೆ, ಅವನು ಫಾಸಿಖ್, ಫಾಜಿರ್ ಆಗಿದ್ದಾನೆ. ಮತ್ತು ಇಸ್ಲಾಂ ಧರ್ಮದಿಂದಲೇ ಹೊರಗೆ ಹೋದವನಾಗುತ್ತಾನೆ. ಇಂತಹ ವ್ಯಕ್ತಿಯೊಂದಿಗೆ ಅಹ್ಮದಿಯಾ ಜಮಾಅತಿಗೆ ಯಾವ ಸಂಬಂಧವೂ ಇರುವುದಿಲ್ಲ. ಆದರೆ ಒಂದು ವಿಷಯ ಖಂಡಿತವಾಗಿಯೂ ಇದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು **ಖಾತಮುನ್ನಬಿಯ್ಯೀನ್** ಪದಕ್ಕೆ ಯಾವ ಅರ್ಥ ನೀಡಿದ್ದಾರೆಯೋ ಮತ್ತು ಯಾವ ಅರ್ಥವನ್ನು ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ವಿವರಿಸಿರುವನೋ ಅದೇ ಅರ್ಥವನ್ನು ಅಹ್ಮದಿಯರು ನೀಡುತ್ತಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗುಲಾಮನಾಗದೆ ಮತ್ತು ಅವರ ಶರೀಅತ್‌ಗೆ ಅಧೀನನಾಗದೆ ಯಾವ ಪ್ರವಾದಿಯೂ ಇನ್ನು ಆಗಮಿಸಲಾರ. ಒಂದು ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: 'ಅಬೂಬಕರ್ ಈ ಸಮುದಾಯದ ಅತ್ಯಂತ ಶ್ರೇಷ್ಠರಾಗಿದ್ದಾರೆ– ನಿಯೋಜಿತರಾಗುವ ಪ್ರವಾದಿಯ ಹೊರತು.' ಇದರಿಂದ ತಿಳಿಯುವುದೇನೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನುಬುವತ್ತಿನ ಬಾಗಿಲನ್ನು ಮುಚ್ಚಿಲ್ಲ. ಬದಲಾಗಿ ಆ ಮಹಾನ್ ಪ್ರವಾದಿಯವರ ನುಬುವ್ವತ್ತಿನ ವಲಯದಿಂದ ಹೊರಗೆ ಯಾವುದೇ ಪ್ರವಾದಿ ಬರಲಾರರು. ಯಾವುದಾದರೂ ಹೊಸ ಶರೀಅತ್ ಬರಲಾರದು. ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರನ್ನು ನಾವು ಮಹ್‌ದೀ ಎಂದೂ ಮಸೀಹ್ ಎಂದೂ ನಬಿ ಎಂದೂ ನಂಬುವುದು, ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪರಿಪೂರ್ಣ ಗುಲಾಮರೆಂಬ ವಿಶ್ವಾಸ ಹೊಂದಿ ನಂಬುತ್ತೇವೆ. ಹಿಂದಿನ ಕಾಲದ ಮುಸ್ಲಿಮ್ ಮತಪಂಡಿತರು ಇದೇ ನಂಬಿಕೆ ಹೊಂದಿದ್ದರು. ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರನ್ನು ಮಸೀಹ್ ಮೌಊದ್ ಎಂದು ನಂಬಿ ಅವರಿಗೆ ನಬಿಯ ಸ್ಥಾನವನ್ನು ನಾವು ನೀಡುವುದು ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪರಿಪೂರ್ಣವಾಗಿ ಅನುಸರಿಸಿದ ಅವರ ದಾಸರಾದ ಕಾರಣದಿಂದಾಗಿದೆ.

ರಬೀಉಲ್ ಅವ್ವಲ್ ದಿನಾಂಕ ಹನ್ನೆರಡಕ್ಕೆ ಸಂಬಂಧಿಸಿ, **ನಾಮೂಸೆ ರಿಸಾಲತ್** ಮತ್ತು **ಖತ್‌ಮೆನುಬುವ್ವತ್** ಹೆಸರಿನಲ್ಲಿ ನಾಲ್ಕು ದಿನಗಳ ಹಿಂದೆ ಪಾಕಿಸ್ತಾನದ ದೋಲ್‌ಮಿಯಾ ಎಂಬ ಊರಿನಲ್ಲಿ ಪುಂಡರು ಮತ್ತು ಮೌಲವಿಗಳು ಮೆರವಣಿಗೆಯಲ್ಲಿ ಬಂದು ನಮ್ಮ ಮಸ್‌ಜಿದನ್ನು ಆಕ್ರಮಿಸಿದರು. ಮಸ್‌ಜಿದ್‌ನೊಳಗೆ ಅಹ್ಮದಿಯರಿದ್ದರು. ಬಾಗಿಲು ಒಳಗಿಂದ ಮುಚ್ಚಲಾಗಿತ್ತು. ಆಗ ಪೋಲೀಸರು ಬಂದು ಬಾಗಿಲು ತೆರೆಯಲು ಹೇಳಿದಾಗ, ಪೋಲೀಸರು ಮಸ್‌ಜಿದನ್ನು ಸಂರಕ್ಷಿಸುವುದಾಗಿ ಖಾತರಿ ನೀಡಿದಾಗ, ಬಾಗಿಲನ್ನು ತೆರೆಯಲಾಯಿತು. ಆಗ ದಂಗೆಕೋರರು ಮಸ್‌ಜಿದ್‌ನೊಳಗೆ ಪ್ರವೇಶಿಸಿದರು. ಪೋಲೀಸರು ಬದಿಗೆ ಸರಿದರು. ದಂಗೆಕೋರರು ಮಸ್‌ಜಿದ್‌ನೊಳಗಿಂದ ಸಾಮಗ್ರಿಗಳನ್ನು ಹೊರಗೆ ಹಾಕಿ ಸುಟ್ಟು ಹಾಕಿದರು. ಹೀಗೆ ಅವರು ಇಸ್ಲಾಮಿಗೆ ಬಹಳ ದೊಡ್ಡ ಸೇವೆ ಸಲ್ಲಿಸಿರುವುದಾಗಿ ಭಾವಿಸಿ ಕೊಂಡರು.

ನಾವು ನಿಯಮ ವ್ಯವಸ್ಥೆಯೊಂದಿಗೆ ಜಗಳ ಮಾಡುವುದಿಲ್ಲ. ಜಡಸಾಮಗ್ರಿಗಳು ನಷ್ಟವಾದ ಬಗ್ಗೆ ನಮಗೆ ಚಿಂತೆ ಇಲ್ಲ. ಅವರು ನಮಗೆ ನಷ್ಟವನ್ನು ಉಂಟುಮಾಡಿದರು. ಆದರೆ ನಮ್ಮ ನಂಬಿಕೆಯನ್ನು, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು, ಪರಿಪೂರ್ಣವಾಗಿ ನಂಬುವುದನ್ನು, ತೌಹೀದನ್ನು ನಮ್ಮ ಹೃದಯದಲ್ಲಿ ಗಾಢವಾಗಿ ಸ್ಥಾಪಿಸುವುದನ್ನು ನಾವು ಯಾವತ್ತೂ ಕೈಬಿಡಲಾರೆವು– ನಮಗೆ ಜೀವಾರ್ಪಣೆ

ಮಾಡಬೇಕಾಗಿ ಬಂದರೂ ಸರಿ. ನಾವು ಯಾವಾಗಲೂ ಇದನ್ನೇ ಹೇಳುತ್ತಾ ಬಂದಿದ್ದೇವೆ. ನಾವು ಇದಕ್ಕೋಸ್ಕರ ಬಲಿದಾನಗಳನ್ನು ನೀಡುತ್ತಾ ಇದ್ದೇವೆ. **ಲಾಇಲಾಹ ಇಲ್ಲಲ್ಲಾಹು ಮುಹಮ್ಮದುರ್‌ರಸೂಲುಲ್ಲಾಹ್** ಎಂಬ ಘೋಷಣೆಯಿಂದ ನಾವು ಎಂದಿಗೂ ಹಿಂದೆ ಸರಿಯಲಾರೆವು.

ಈ ಜನರು ಆಚಾರ ರೂಪದಲ್ಲಿ ಮಿಲಾದ್ ದಿನಾಚರಣೆ ಮಾಡುತ್ತಾರೆ. ಆಚಾರ ರೂಪದಲ್ಲಿ ಜಮಾಯಿಸಿ ಭಾಷಣ ಮಾಡುತ್ತಾರೆ. ಪಾಕಿಸ್ಥಾನದಲ್ಲಿ ಬಹುತೇಕ ಜನರು ಮಾಡುವ ಭಾಷಣಗಳಲ್ಲಿ ಅಹ್ಮದಿಯರನ್ನು ಬಯ್ಯುವುದರ ಹೊರತು ಬೇರೇನೂ ಇರುವುದಿಲ್ಲ. ಅವರು ತಾತ್ಕಾಲಿಕ ಉತ್ಸಾಹಭರಿತರಾಗಿ ಕೊಳಕು ಭಾಷಣಗಳನ್ನು ಉಗುಳಿ ನಾವು ಇಸ್ಲಾಮ್‌ಗೆ ಬಹಳ ಸೇವೆ ಮಾಡಿದೆವು ಎಂದು ಭಾವಿಸುತ್ತಾರೆ. ಆದರೆ ಯಥಾರ್ಥದಲ್ಲಿ ಇಸ್ಲಾಮ್ ಧರ್ಮಕ್ಕೆ ಸೇವೆ ಸಲ್ಲಿಸುವ ಹೊಣೆಗಾರಿಕೆಯನ್ನು ಅಹ್ಮದಿಯಾ ಜಮಾಅತ್ ಹೊತ್ತುಕೊಂಡಿದೆ. ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತೌಹೀದನ್ನು ಮತ್ತು ಹರ್ಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗೌರವವನ್ನು ಲೋಕದಲ್ಲಿ ಸ್ಥಾಪಿಸಲು ನಾನು ಆಗಮಿಸಿದ್ದೇನೆಂದು ಘೋಷಿಸಿದಾಗಲೇ ಅದು ಪ್ರಾರಂಭವಾಯಿತು. ಇಸ್ಲಾಮ್ ಧರ್ಮದ ಪುನಶ್ಚೇತನ ನನ್ನ ಮೂಲಕ ಆಗಲಿದೆ ಎಂದು ಅವರು ಹೇಳಿದರು. ಅನಂತರ ದ್ವಿತೀಯ ಖಿಲಾಫತ್ ಕಾಲದಲ್ಲಿ ಹರ್ಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಮುಸ್ಲಿಮೇತರರು ಪತ್ರಿಕೆಗಳಲ್ಲಿಯೂ ಪುಸ್ತಕಗಳಲ್ಲಿಯೂ ಅತ್ಯಂತ ಕೊಳಕು ಭಾಷೆಯನ್ನು ಬಳಸಿ ಆಕ್ರಮಿಸಲು ಪ್ರಾರಂಭಿಸಿದಾಗ, ಹರ್ಝ್‌ರತ್ ಖಲೀಫತುಲ್ ಮಸೀಹ್ ಸಾನೀ ಹಿಂದೂಸ್ಥಾನದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಸೀರತುನ್ನಬೀ ಸಮ್ಮೇಳನಗಳನ್ನು ಜರಗಿಸಿದರು. ಅವರು ಅಹ್ಮದಿಯರೊಂದಿಗೂ ಅಹ್ಮದಿಯೇತರ ಮುಸ್ಲಿಮರೊಂದಿಗೂ ಹೇಳಿದರು: ಈಗ ನಾವು ನಮ್ಮ ಭಿನ್ನಾಭಿಪ್ರಾಯಗಳನ್ನು ಬಿಟ್ಟು ಒಗ್ಗಟ್ಟಾಗಿ ನಿಂತು ಹರ್ಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಇಸ್ಲಾಮ್ ವಿರುದ್ಧ ನಡೆಯುತ್ತಿರುವ ಆಕ್ರಮಣಗಳನ್ನು ಪ್ರತಿರೋಧಿಸಬೇಕು ಎಂದು. ಇಂತಹ ಸಮ್ಮೇಳನಗಳನ್ನು ಅವರು ವಿಶಾಲವಾಗಿ ಪ್ರಾರಂಭಿಸಿದರು. ಅವರು ಇಂತಹ ಸಭೆಗಳಲ್ಲಿ ಭಾಷಣ ಮಾಡಲು ಸಜ್ಜನರಾದ ಮುಸ್ಲಿಮೇತರರನ್ನು ಸಹ ಆಮಂತ್ರಿಸಿದ್ದರು. ಅನೇಕ ವಿದ್ಯಾವಂತರಾದ ಮುಸ್ಲಿಮೇತರರು– ಅವರಲ್ಲಿ ಹಿಂದುಗಳೂ ಸೇರಿದ್ದರು– ಸಭೆಗಳಲ್ಲಿ ತಮ್ಮ ಪ್ರಬಂಧಗಳನ್ನು ಓದಿದರು. 1928ರಲ್ಲಿ ಖಾದಿಯಾನ್‌ನಲ್ಲಿ ಪ್ರಥಮ ಸೀರತುನ್ನಬೀ ಸಭೆ ಜರಗಿದಾಗ ಹಿಂದೂ ಕವಿಗಳು ಸ್ತುತಿಗೀತೆಗಳನ್ನು ಹಾಡಿದ್ದರು. ಹಿಂದೂಸ್ಥಾನದಾದ್ಯಂತ ಹರ್ಝ್‌ರತ್ ಖಲೀಫತುಲ್ ಮಸೀಹ್ ಸಾನಿಯವರ ಪ್ರೇರೇಪಣೆ ಮೂಲಕ ಸೀರತುನ್ನಬೀ ಸಮ್ಮೇಳನಗಳು ಜರಗಿದುವು. ವಿಶ್ವಾಸಕ್ಕೆ ಸಂಬಂಧಿಸಿ ಅಭಿಪ್ರಾಯ ವ್ಯತ್ಯಾಸವಿದ್ದರೂ ಅನೇಕ ಜನರು ಈ ಯೋಜನೆಯು ಜಯಶಾಲಿಯಾಗುವಂತೆ ಪ್ರಯತ್ನಿಸಿದರು. ಪತ್ರಿಕೆಗಳು ಇದರ ಬಗ್ಗೆ ಸಮಾಚಾರಗಳನ್ನೂ ಅಭಿಪ್ರಾಯಗಳನ್ನೂ ಪ್ರಕಟಿಸಿದುವು.

ನಮ್ಮ ಅಲ್‌ಫಝ್ಲ್ ಪತ್ರಿಕೆ ಆಗ **ಖಾತಮುನ್ನಬಿಯ್ಯೀನ್** ವಿಶೇಷಾಂಕ ಪ್ರಕಟಿಸಿತು. ಅನಂತರ ಅಹ್ಮದಿಯಾ ಜಮಾಅತ್ ಪ್ರತಿವರ್ಷ ಸೀರತುನ್ನಬೀ ಸಮ್ಮೇಳನಗಳನ್ನು ಜರಗಿಸುತ್ತಾ ಇದೆ. ಹರ್ಝ್‌ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು ನಾಲ್ಕೈದು ವಿಶೇಷ ಅಂಶಗಳನ್ನು ಸೂಚಿಸಿದ್ದರು. ಅದರಲ್ಲಿ ಒಂದು, ಸೀರತುನ್ನಬೀ ಜಲ್ಸ ಕೇವಲ ರಬೀಉಲ್ ಅವ್ವಲ್ 12ಕ್ಕೆ ಸೀಮಿತಗೊಳಿಸದೆ ವರ್ಷದಾದ್ಯಂತ ವಿವಿಧ ಕಾಲಗಳಲ್ಲಿ ಸಮ್ಮೇಳನ ಜರಗಿಸಬೇಕು ಎಂದಾಗಿತ್ತು. ಇದು ಅಹ್ಮದಿಯಾ ಜಮಾಅತಿನ ಚರಿತ್ರೆಯಾಗಿದೆ. ಇಂದು ಇನ್ನೂರಕ್ಕಿಂತ ಹೆಚ್ಚು ದೇಶಗಳಲ್ಲಿ ಅಹ್ಮದಿಯಾ ಜಮಾಅತ್ ಸ್ಥಾಪಿತವಾಗಿದೆ. ಅಲ್ಲೆಲ್ಲಾ ಈ ಸಮ್ಮೇಳನಗಳು ಜರಗಿಸಲಾಗುತ್ತಿವೆ. ಇದೇ ರೀತಿ ಯಾವಾಗಲೂ ಜರಗಿಸುತ್ತಾ ಇರುವರು– ಇನ್‌ಶಾಅಲ್ಲಾಹ್. **ಖತ್‌ಮೆನುಬುವ್ವತ್** ಎಂದರೇನೆಂದು ಸರಿಯಾದ ಜ್ಞಾನಗಳಿಸಿರುವ ಅಹ್ಮದಿಯರು ಹರ್ಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನೈಜ ಸ್ಥಾನವೇನೆಂದು ಲೋಕಕ್ಕೆ ತಿಳಿಸುತ್ತಾ ಇದ್ದಾರೆ. ಇದು ಏಕೆಂದರೆ ಈ ಕಾಲಘಟ್ಟದ ಇಮಾಮರೂ, ವಾಗ್ದತ್ತ ಮಸೀಹ್ ಮತ್ತು ಮಹ್‌ದೀ ಆಗಿರುವವರು (ಅಲೈಹಿಸ್ಸಲಾಮ್) ನಮ್ಮೊಂದಿಗೆ ಹೀಗೆ ಹೇಳಿದ್ದಾರೆ: ನೀವು ಅಲ್ಲಾಹನ ಸಾಮೀಪ್ಯಗಳಿಸಲು ಬಯಸುವುದಾದರೆ ಹರ್ಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸಿರಿ. ಮೋಕ್ಷದ ಮಾರ್ಗ ಅವರೇ ಆಗಿದ್ದಾರೆ. ಅವರ ಮೂಲಕವಲ್ಲದೆ ಮೋಕ್ಷ ಗಳಿಸಲು ಬೇರೆ ಯಾವ ಮಾರ್ಗವೂ ಇಲ್ಲ. ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಾನು ದೊಡ್ಡವನು ಎಂದು ಎಂದೂ ಹೇಳಲಿಲ್ಲ. ಅವರು ಯಾವಾಗಲೂ ಹರ್ಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದೊಡ್ಡಸ್ಥಿಕೆಯನ್ನು ವಿವರಿಸುತ್ತಾ ಇದ್ದರು.

ಹರ್ಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು **ಖಾತಮುನ್ನಬಿಯ್ಯೀನ್** ಎಂದು ನಂಬುವುದಿಲ್ಲ ಎಂಬ ದೋಷಾರೋಪವನ್ನು ಖಂಡಿಸುತ್ತಾ ಅವರು ಹೀಗೆ ಹೇಳಿದರು: 'ನನ್ನ ಮತ್ತು ನನ್ನ ಜಮಾಅತಿನ ವಿರುದ್ಧ, ನಾವು ಹರ್ಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಖಾತಮುನ್ನಬಿಯ್ಯೀನ್ ಎಂದು ನಂಬುವುದಿಲ್ಲ ಎಂದು ದೋಷಾರೋಪ ಹೊರಿಸಲಾಗುತ್ತದೆ. ಇದು ನಮ್ಮ ವಿರುದ್ಧ ಸೃಷ್ಟಿಸಲಾದ ಬೃಹತ್ತಾದ ಸುಳ್ಳಾಗಿದೆ. ನಾವು ಎಷ್ಟು ಶಕ್ತಿಯುತವಾಗಿ, ದೃಢವಾದ ಸೂಕ್ಷ್ಮಜ್ಞಾನ ಹೊಂದಿ ಹರ್ಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು **ಖಾತಮುನ್ನಬಿಯ್ಯೀನ್** ಎಂದು ನಂಬುತ್ತೇವೋ ಆ ವಿಶ್ವಾಸದ ಲಕ್ಷದಲ್ಲಿ ಒಂದು ಪಾಲಷ್ಟು ಸಹ ಬೇರೆ ಜನರು ನಂಬುವುದಿಲ್ಲ. **ಖಾತಮುನ್ನಬಿಯ್ಯೀನ್**ನಲ್ಲಿರುವ ಖತ್‌ಮೆನುಬುವ್ವತ್ತಿನ ರಹಸ್ಯ ಏನೆಂದು ಅರಿತುಕೊಳ್ಳುವ ಸಾಮರ್ಥ್ಯ ಸಹ ಅವರಿಗಿರುವುದಿಲ್ಲ. ಅವರಿಗೆ ಅದರ ಬಗ್ಗೆ ತಿಳಿದೇ ಇಲ್ಲ. ಅವರು ತಮ್ಮ ತಂದೆ ತಾತಂದಿರಿಂದ ಒಂದು ಶಬ್ದವನ್ನು ಆಲಿಸಿದರು. ಆದರೆ ಅವರಿಗೆ ಅದರ ವಾಸ್ತವಿಕ ಅರ್ಥವೇನೆಂದು ತಿಳಿದಿಲ್ಲ. **ಖತ್‌ಮೆನುಬುವ್ವತ್** ಎಂದರೇನೆಂದು ಅವರಿಗೆ ತಿಳಿದಿಲ್ಲ. ಅದನ್ನು ನಂಬುವುದರ ಅರ್ಥವೇನೆಂದೂ ಅವರಿಗೆ ತಿಳಿದಿಲ್ಲ. ಆದರೆ ನಾವು ಪೂರ್ಣ ಜ್ಞಾನದೊಂದಿಗೆ–

ಅದರ ಬಗ್ಗೆ ಅಲ್ಲಾಹನಿಗೆ ಚೆನ್ನಾಗಿ ತಿಳಿದಿದೆ– ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು **ಖಾತಮುಲ್‌ಅಂಬಿಯಾ** ಎಂದು ನಂಬುತ್ತೇವೆ. ಅಲ್ಲಾಹನು ನಮಗೆ ಖತ್‌ಮೆನುಬುವ್ವತ್ತಿನ ನೈಜ ರೂಪವನ್ನು ಎಷ್ಟು ಸ್ಪಷ್ಟವಾಗಿ ವಿವರಿಸಿರುವನೆಂದರೆ, ಅದರ ಜ್ಞಾನದ ಪಾನೀಯವನ್ನು ಹೇಗೆ ಕುಡಿಸಿರುವನೆಂದರೆ, ಅದರಿಂದ ನಾವು ವಿಶಿಷ್ಟ ರಸಾನುಭೂತಿ ಗಳಿಸಿದ್ದೇವೆ. ಈ ನೀರ ಝುರಿಯಿಂದ ದಾಹವಡಗಿಸಿದವರ ಹೊರತು ಇತರ ಯಾರಿಂದಲೂ ಅದನ್ನು ಅಂದಾಜು ಮಾಡಲು ಸಹ ಸಾಧ್ಯವಿಲ್ಲ.'

ನಮ್ಮನ್ನು ಖತ್‌ಮೆನುಬುವ್ವತ್ತನ್ನು ನಿರಾಕರಿಸುವವರು ಎಂದು ಭಾವಿಸುವವರು ಅಂಧರಾಗಿದ್ದಾರೆ. ಅವರ ಹೃದಯ ಪೊಳ್ಳಾಗಿದೆ. ಘೋಷಣೆ ಕೂಗುವುದು, ಗಲಬೆಗೊಂದಲ ಮಾಡುವುದು, ಧ್ವಂಸ ಮಾಡುವುದು, ಇವುಗಳ ಹೊರತು ಅವರ ಬಳಿಯಲ್ಲಿ ಬೇರೆ ಏನಿದೆ? ಇಂದು ಅಹ್ಮದಿಯಾ ಜಮಾಅತ್ ಇಸ್ಲಾಮ್ ಧರ್ಮದ ಸುಂದರವಾದ ಸಂದೇಶವನ್ನು ಲೋಕದಲ್ಲೆಲ್ಲಾ ಹರಡುತ್ತಾ ಇರುವುದು, ಹಝ್ರತ್ ಖಾತಮುಲ್ ಅಂಬಿಯಾ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಉಮ್ಮತ್‌ಗೋಸ್ಕರ ಮಾಡಿದ ದುಆಗಳಿಂದ ಅಹ್ಮದಿಯಾ ಜಮಾಅತ್ ಮಾತ್ರ ಪಾಲು ಪಡೆಯುತ್ತಿದೆ ಎಂಬುದಕ್ಕೆ ಸಾಕ್ಷ್ಯಾಧಾರವಲ್ಲವೇ?

ಖತ್‌ಮೆನುಬುವ್ವತ್ ಎಂಬುದರ ವಾಸ್ತವಿಕತೆ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: 'ನಮಗೆ ಅಲ್ಲಾಹನು ಎಂತಹ ಪ್ರವಾದಿವರ್ಯರನ್ನು ನೀಡಿರುವನೆಂದರೆ, ಅವರು **ಖಾತಮುಲ್ ಮೂಮಿನೀನ್, ಖಾತಮುಲ್ ಆರಿಫೀನ್, ಖಾತಮುನ್ನಬಿಯ್ಯೀನ್** ಆಗಿರುವರು. ಅವರಿಗೆ ಎಂತಹ ಗ್ರಂಥ ನೀಡಲ್ಪಟ್ಟಿತೆಂದರೆ, ಅದು **ಜಾಮಿಉಲ್ ಕುತುಬ್** ಮತ್ತು **ಖಾತಮುಲ್ ಕುತುಬ್** ಆಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖಾತಮುನ್ನಬಿಯ್ಯೀನ್ ಆಗಿರುವರು. ಅವರಲ್ಲಿ ನುಬುವ್ವತ್ ಖತ್‌ಮ್ ಆಯಿತು. ಆದರೆ ಇದು ಒಬ್ಬನನ್ನು ಉಸಿರುಗಟ್ಟಿಸಿ ಖತ್‌ಮ್‌ಗೊಳಿಸುವ ರೀತಿಯಲ್ಲಿ ಇರುವುದಲ್ಲ. ಇಂತಹ ಖತ್‌ಮ್ (ಕೊನೆಗೊಳಿಸುವಿಕೆ) ಅಭಿಮಾನಪಡುವಂತಹದ್ದೂ ಅಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ನುಬುವ್ವತ್ ಖತ್‌ಮ್ ಆಯಿತು ಎನ್ನುವುದರ ಅರ್ಥ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ನುಬುವ್ವತ್‌ಗೆ ಸಂಬಂಧಿಸಿದ ಎಲ್ಲ ಪರಿಪೂರ್ಣತೆಗಳು ಸಮಾವೇಶಗೊಂಡವು ಎಂದಾಗಿದೆ. ಎಂದರೆ ಆದಮರಿಂದ ಮೊದಲುಗೊಂಡು ಮಸೀಹಿಬ್ನು ಮರ್‌ಯಮ್ ತನಕದ ಎಲ್ಲ ಪ್ರವಾದಿಗಳಿಗೆ ನೀಡಲ್ಪಟ್ಟ ವಿವಿಧ ಪರಿಪೂರ್ಣತೆಗಳು ಎಲ್ಲವೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ಜಮಾಯಿಸಲ್ಪಟ್ಟವು. ಈ ಕಾರಣದಿಂದ ಅವರು ಸಹಜವಾಗಿ **ಖಾತಮುನ್ನಬಿಯ್ಯೀನ್** ಆದರು. ಇದೇ ರೀತಿ ವಿವಿಧ ಉಪದೇಶಗಳು ಮತ್ತು ಜ್ಞಾನಗಳು ವಿವಿಧ ಗ್ರಂಥಗಳಲ್ಲಿದ್ದವು. ಅವೆಲ್ಲಾ ಪವಿತ್ರ ಖುರ್‌ಆನಿನಲ್ಲಿ ಸೇರಿಕೊಂಡುವು. ಮತ್ತು ಪವಿತ್ರ ಖುರ್‌ಆನ್ ಖಾತಮುಲ್ ಕುತುಬ್ ಆಯಿತು.'

ಶತ್ರುಗಳು ನಮ್ಮ ವಿರುದ್ಧ ಏನು ಬೇಕಾದರೂ ಹೇಳಲಿ. ಅವರು ನಮ್ಮ ವಿರುದ್ಧ ಅವರಿಗಿಷ್ಟಪಡುವ ದೋಷಾರೋಪ ಹೊರಿಸುತ್ತಾ ಇರಲಿ. ಆದರೆ ನಮ್ಮ ಹೃದಯದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಪ್ರೀತಿ ಇದೆ. ಅವರು **ಖಾತಮುನ್ನಬಿಯ್ಯೀನ್** ಆಗಿರುವ ಬಗ್ಗೆ ನಮಗೆ ಎಲ್ಲರಿಗಿಂತ ಹೆಚ್ಚು ಜ್ಞಾನವಿದೆ. ಇವೆಲ್ಲಾ ನಮಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳಿಂದ ಲಭಿಸಿದ್ದು ಆಗಿದೆ.

ಶತ್ರುವಿನ ಪ್ರತಿಯೊಂದು ಆಕ್ರಮಣದ ನಂತರ ನಾವು ಮೊದಲಿಗಿಂತ ಹೆಚ್ಚು ದೃಢವಿಶ್ವಾಸಿಗಳಾಗುವಂತೆ ಅಲ್ಲಾಹನು ಅನುಗ್ರಹಿಸಲಿ. ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮೊದಲಿಗಿಂತ ಹೆಚ್ಚು ದುರೂದ್ ದುಆ ಅರ್ಪಿಸುವವರಾಗಲಿ. ಆ ಮೂಲಕ ಇತರ ಮುಸ್ಲಿಮರಿಗೆ ಸಹ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸರಿಯಾದ ಸ್ಥಾನದ ಜ್ಞಾನ ಲಭಿಸಲಿ. ಹಾಗೆ, ದಾರಿ ತಪ್ಪಿದ ಮುಸ್ಲಿಮರು ಸರಿಯಾದ ಮಾರ್ಗವನ್ನು ಅವಲಂಬಿಸುವಂತಾಗಲಿ. ಹಾಗೂ ಸಮಸ್ತ ಲೋಕದಲ್ಲಿ ಇಸ್ಲಾಮಿನ ಸುಂದರ ಉಪದೇಶಗಳು ಹರಡುವಂತಾಗಲಿ – ಆಮೀನ್.

—————————*****—————————


***Friday Sermon delivered by Hadrath Khaleefatul Masih Al Khamis***(atba)

*At, Masjid Baithul Futhuh, London on 16-12-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon